† ಶ್ರೀ ವಿ. ಎನ್. ಪಾಟೀಲ್.—ಹಾನನದಲ್ಲಿ ಏಡೆಡ್ ಹಾಸ್ಟಲ್‌ಗಾಗಿ ಯಾವ ಕಟ್ಟಡವನ್ನೂ ಕಟ್ಟಿಲ್ಲ.

ಶ್ರೀ ಹೆಚ್. ಬಿ. ಜ್ಯಾಲನಯ್ಯ.—ಸರಕಾರ ಎರಡು ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಯಾವ ಹಾಸ್ಟಲನ್ನೂ ಕಟ್ಟಿಸಿಲ್ಲವೇ ?

ಶ್ರೀ ವಿ. ಎನ್. ಪಾಟೀಲ್.—ತಾವು ಇಲ್ಲಿ ಏಡೆಡ್ ಹಾಸ್ಟಲ್ ಬಗ್ಗೆ ಕೇಳಿದ್ದೀರಿ. ಬೇರೆ ಪ್ರಶ್ನೆ ಕೇಳಿದರೆ ಆಗ ಇದರ ಬಗ್ಗೆ ಉತ್ತರ ಕೊಡಬಹುದು.

ಶ್ರೀ ಜಿ. ದುಗ್ಗಪ್ಪ.—ತಾವು ಏಡೆಡ್ ಹಾಸ್ಟಲ್ ಎಂದು ನೆಪ ಮಾಡಿಕೊಂಡು ಇಲ್ಲ ಉತ್ತರ ಕೊಟ್ಟರೆ ಹೇಗೆ ? ಸರಕಾರದವರು ಇಲ್ಲಿ ಹರಿಜನರಿಗೇ ಹಾಸ್ಟಲ್‌ನ್ನು ಕಟ್ಟಿಸಿದ್ದಾರೆ. ಈಗಲಾದರೂ ನಿಮ್ಮ ಡಿಪಾರ್ಟ್‌ಮೆಂಟು ಅಧಿಕಾರಿಗಳನ್ನು ಕೇಳಿ ಆ ನಂತರ ಇಂತಹ ಹಾಸ್ಟಲ್ ಇದೆಯೇ ಇಲ್ಲವೇ ಎನ್ನುವುದರ ಬಗ್ಗೆ ಉತ್ತರ ಕೊಡುತ್ತೀರಾ ?

ಶ್ರೀ ವಿ. ಎನ್. ಪಾಟೀಲ್.—ಪ್ರತ್ಯೇಕವಾದ ಇನ್ನೊಂದು ಪ್ರಶ್ನೆ ಹಾಸ್ಟಲುಗಳ ಬಗ್ಗೆ ಹಾಕಿದರೆ ಆಗ ಎಲ್ಲ ವಿವರಗಳನ್ನೂ ಒದಗಿಸಿಕೊಡುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರುಂಗನಾಥ್.—ಒಂದು ಸಾರಿ ನಾನು ತಮ್ಮ ಕಡೆಗೆ ಇಂತಹ ಹಾಸ್ಟಲ್ ಬಗ್ಗೆ ಹೇಳಿದಾಗ ತಾವು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಿರಿ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಸದಸ್ಯರು ಬಂದಿದ್ದಾಗ ನಾನು ಹೇಳಿದೆ ಇಂತಹ ಯಾವ ಇನ್‌ಸ್ಟಿಟ್ಯೂಷನ್‌ಗಳೂ ಇಲ್ಲ ಎಂದು ಮತ್ತು ಇದರ ಸಂಬಂಧ ಪತ್ರವ್ಯವಹಾರಗಳನ್ನು ತಂದು ಕೊಟ್ಟರೆ ಆಗ ಪರಿಶೀಲನೆ ಮಾಡಬಹುದು ಎಂದು ಹೇಳಿದೆ. ಇದುವರೆಗೂ ನನ್ನ ಕಡೆಗೆ ವಿವರಗಳು ಬರಲಿಲ್ಲ. ನಮ್ಮಲ್ಲಿ ಯಾವ ರಿಕಾರ್ಡುಗಳೂ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹಾನನದಲ್ಲಿ ಡಿಪ್ರಸ್ಡ್ ಕ್ಲಾಸ್ ಅಮಿಲಿಯೋರೇಷನ್ ಫಂಡಿನಿಂದ ಒಂದು ಹರಿಜನರ ಹಾಸ್ಟಲ್ ಕಟ್ಟಿಸಿರುವುದು ನಿಜವೇ ? ಹಾಗಿದ್ದರೂ ಇದು ಇನ್ನೂ ಉಪಯೋಗ ಮಾಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವಿ. ಎನ್. ಪಾಟೀಲ್.—ಇದು ಬೇರೆ ಪ್ರಶ್ನೆ. ತಾವು ಬೇರೆ ಪ್ರಶ್ನೆ ಹಾಕಿದರೆ ಆಗ ವಿವರಗಳನ್ನು ಕೊಡಬಹುದು.

ಶ್ರೀ ಹೆಚ್. ಬಿ. ಜ್ಯಾಲನಯ್ಯ.—ಸರಕಾರದಲ್ಲಿ ಸೋಷಿಯಲ್ ವೆಲ್‌ಫೇರ್ ಇರಾಖೆ ಇದೆ. ಇದರ ಮೂಲಕ ಹಣ ಕೊಟ್ಟು ಹರಿಜನರಿಗಾಗಿ ಹಾಸ್ಟಲ್ ಕಟ್ಟಿಸಿರುವುದು ತಮಗೆ ಗೊತ್ತಿಲ್ಲವೇ ?

ಶ್ರೀ ವಿ. ಎನ್. ಪಾಟೀಲ್.—ಬೇರೆ ಪ್ರಶ್ನೆ ಕೇಳಿದರೆ ಆಗ ಹೇಳಬಹುದು.

Major and Medium Irrigation Projects taken up during II and III Plan Periods

259. Sri N. HUTCHMASTY GOWDA (Huliyurdurga).—

Will the Chief Minister be pleased to state :—

(*a*) the Major and Medium Irrigation Projects taken up for execution during the Second and Third Five Year Plan periods in the State ;

) the amount spent during these two plan periods on each of these projects (yearwise expenditure may be furnished) ;

(c) whether there are any projects taken up after the third Plan Period and if so, the name of the project and the money spent on each of the projects (yearwise expenditure may be given) ?

Sri VEERENDRA PATIL (Chief Minister).—

(a) and (b) *Vide* Statement enclosed.

(c) Tungabhadra High Level Canal Stage II.

Expenditure incurred during—

1967-68 Rs. 5.61 lakhs.

1968-69 Rs. 9.56 lakhs.

(SRI VEERENDRA PATIL)

Statement showing the expenditure incurred on Major and Medium

Name of the Project	II Five Year Plan Schemes					
	1956–57	1957–58	1958–59	1959–60	1960–61	Total
1	2	3	4	5	6	7
NORTH ZONE.—						
1. Ghataprabha Stage I ...	22.70	45·77	42.33	35.61	50.60	...
2. Dharma Project ...	0.39	0.39	5.14	9.07	22.16	...
3. Hathikoni Project ...	...	...	0.61	2.08	2.33	...
4. Nagathana Project ...	...	0.57	4.28	2.55	2.48	...
5. Malaprabha Project ...	...	...	...	...	10.82	...
6. Upper-Krishna Project ...	...	0.83	2.42	1.32	2.03	...
7. Harinala Project ...	...	...	...	...	...	...
8. Chandrampalli Project ...	...	...	...	...	...	...
9. Chitwadgi Irrigation Scheme.	...	...	...	...	...	...
SOUTH ZONE.—						
1. TBP HLC Stage I ...	...	...	...	0.12	0.20	0.32
2. Kabini Project ...	0.04	0.45	3.72	19.01	25.20	48.42
3. Hagaribommanahalli Project.	...	0.01	0.04	0.11	2.35	2.51
4. Jambadahalla Project.	...	0.05	0.01	1.22	3.64	4.92
5. Hebbahalla ...	...	0.25	0.56	4.53	5.40	10.74
6. Laxmanathirtha Project	0.25	0.18	4.64	2.69	0.93	8.69
7. Mangala Project ...	...	...	...	1.12	1.67	2.79
8. Kanakanala ...	...	...	0.20	0 16	8.36	8.72
9. Chickhole Project ...	0.25	0.18	1.30	2.91	4.96	9.60
10. Harangi ...	...	...	...	...	...	...
11. K. R. S. Works ...	...	...	...	...	...	...
12. Hemavathy ...	...	...	...	...	...	...
13. Bijjur ...	...	...	...	...	...	...
14. Suvarnavathy ...	...	...	...	...	...	...

Irrigation Projects during Second Plan and Third Plan periods

III Five Year Plan Schemes					
1961–62	1962–63	1963–64	1964–65	1965–66	Total
8	9	10	11	12	13
69.06	69.17	96.78	79.37	109.32	620.71
15.58	11.84	24.16	18.05	0 98	111.56
1.74	3.08	7.76	11.60	11.63	40.83
1.13	0.46	0.25	0.13	0.32	12.17
38.28	45.28	33.59	30.26	38.09	196.32
5.31	26.17	20.35	65.26	46.87	176.56
1.50	1.67	1.24	0.97	1.36	6.74
...	...	0.09	1.75	1.26	3.10
...	...	...	...	0.81	0.81
117.69	83.18	85.44	66.88	76.66	429.75
20.16	31.50	36.96	40.53	95.58	174.73
6.39	1.69	2.74	13.20	19.81	43.83
6.45	17.91	18.63	7.74	5.01	55.74
8.90	5.95	11.14	3.63	1.04	30.66
...	...	...	...	...	...
2.39	4.04	4.34	4.45	7.69	22.91
18.32	21.32	7.04	8.33	5.93	60.94
8.17	9.62	15.34	22.63	14.06	69.82
...	...	0.12	0.36	1.12	1.60
23.99	19.23	20.58	17.03	12 11	92.94
...	0.02	1.13	1.24	1.62	4.01
...	0.02	0.27	0.61	0.71	1.61
...	...	...	0.01	0.06	0.07

1-30 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ ಈ ಪಟ್ಟಿಯಲ್ಲಿ 1965—66ರ ವರೆಗೆ ಯಾವ ಯಾವುದಕ್ಕೆ ಎಷ್ಟೆಷ್ಟು ಖರ್ಚಾಗಿದೆ ಎನ್ನುವುದಕ್ಕೆ ಉತ್ತರ ಕೊಟ್ಟಿದ್ದೀರಿ. ಆದರೆ ಇತ್ತೀಚಿನ ವರ್ಷಕ್ಕೆ ಅಂದರೆ 3 ವರ್ಷಗಳಿಂದ ಈ ಪ್ರಾಜೆಕ್ಟಿಗೆ ಎಷ್ಟೆಷ್ಟು ಖರ್ಚಾಗಿದೆ ಎನ್ನುವ ಅಂಕಅಂಶ ಗಳನ್ನು ಕೊಡುವುದಕ್ಕೆ ಸಾಧ್ಯವೇ ?

† ಶ್ರೀ ವೀರೇಂದ್ರಪಾಟೀಲ್.—ಅವರು ಎಷ್ಟು ಪ್ರಶ್ನೆ ಕೇಳಿದ್ದಾರೆ ಅಷ್ಟಕ್ಕೆ ಉತ್ತರ ಕೊಟ್ಟಿದ್ದೇವೆ. ಅವರು ಎರಡನೆಯ ಹಾಗೂ ಮೂರನೆಯ ಪಂಚವಾರ್ಷಿಕ ಯೋಜನೆಗಳಲ್ಲಿ 1965-66 ರವರೆಗೆ ಎಷ್ಟು ಖರ್ಚಾಗಿದೆ ಎಂದು ಕೇಳಿದ್ದರಿಂದ ಅದನ್ನು ಮಾತ್ರ ಕೊಟ್ಟಿದ್ದೇವೆಯೇ ಹೊರತು ಉಳಿದುದನ್ನು ಕೇಳಿದ್ದರೆ ಅದನ್ನೂ ಕೊಡಬಹುದಾಗಿತ್ತು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ನಾರ್ತ್ ಜೋನ್‌ನಲ್ಲಿ ಇಲ್ಲಿಯವರೆಗೆ ಸುಮಾರು 30 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಅದೇ ಸೌತ್ ಜೋನ್‌ನಲ್ಲಿ ತುಂಗಭದ್ರಾ ಹೈ ಕೆನಾಲ್ ಒಂದನ್ನು ಬಿಟ್ಟರೆ ಸುಮಾರು 5-6 ಕೋಟಿ ರೂಪಾಯಿ ಖರ್ಚಾಗಿದೆ. ಇಷ್ಟು ವ್ಯತ್ಯಾಸ ಇರಲು ಕಾರಣ ಏನು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಯಾವ ರೀತಿ ಕ್ಯಾಲುಕಲೇಟ್ ಮಾಡಿದ್ದಾರೋ ನನಗೆ ಗೊತ್ತಿಲ್ಲ. ನನ್ನ ಕ್ಯಾಲುಕಲೇಷನ್ ಪ್ರಕಾರ ನಾರ್ತ್ ಜೋನ್‌ಗೆ 11 ಕೋಟಿ 62 ಲಕ್ಷ 83 ಸಾವಿರ ರೂಪಾಯಿ ಖರ್ಚಾಗಿದೆ. ಸೌತ್ ಜೋನ್‌ಗೆ 10 ಕೋಟಿ 85 ಲಕ್ಷ 32 ಸಾವಿರ ರೂಪಾಯಿ ಖರ್ಚಾಗಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ, ನಾರ್ತ್ ಜೋನ್‌ನಲ್ಲಿರುವ ಪ್ರಾಜೆಕ್ಟ್‌ಗಳನ್ನು 1956-57 ರಿಂದ 1965ರವರೆಗೂ ಮುಂದುವರಿಸಿಕೊಂಡು ಬಂದಿದ್ದೀರಿ. ಆದರೂ ಕಂಪ್ಲೀಟ್ ಆಗಿಲ್ಲ. ಆದುದರಿಂದ ಇವನ್ನು ಕಂಪ್ಲೀಟ್ ಮಾಡಲು ಇನ್ನು ಎಷ್ಟು ದಿವಸಬೇಕು ? ಎಷ್ಟು ಖರ್ಚಾ ಗುತ್ತದೆ ಎಂದು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೇಳುವಂಥ ಪ್ರಶ್ನೆಗೆ ಉತ್ತರ ಹೇಳಲು ಈಗ ಆಗುವುದಿಲ್ಲ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ, 1967-68ನೇ ಸಾಲಿನಲ್ಲಿ 5.61 ಲಕ್ಷ ರೂಪಾಯಿ ಮತ್ತು 1968-69 ನೇ ಸಾಲಿನಲ್ಲಿ 9.56 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ ? ಇದನ್ನು ಏನಾದರೂ ನಮ್ಮ ಸರ್ಕಾರ ಖರ್ಚು ಮಾಡಿದೆಯೋ ಅಥವಾ ಇದರಲ್ಲಿ ಆಂಧ್ರ ಸರ್ಕಾರ ದವರು ಏನಾದರೂ ಕಾಂಟ್ರಿಬ್ಯೂಷನ್ ಇದೆಯೇ ? ಎರಡನೆಯದಾಗಿ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ 176.56 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ ? ಅದರಲ್ಲಿ ಏನು ಡೆವಲಪ್‌ಮೆಂಟ್ ಆಗಿದೆ ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲನೇ ಪ್ರಶ್ನೆಗೆ ಉತ್ತರವಾಗಿ ನಮ್ಮ ಪ್ಲಾನ್‌ನಲ್ಲಿ ಏನು ದುಡ್ಡು ಖರ್ಚು ಮಾಡಿದ್ದೇವೆ ಅದು ಎರಡನೇ ಸರ್ಕಾರ ಕೊಟ್ಟಂತಿಲ್ಲ. ಈಗ ಎಷ್ಟು ದುಡ್ಡು ಖರ್ಚುಮಾಡಿದ್ದೇವೆ ಅವೆರ್ಲಾ ನಮ್ಮ ದುಡ್ಡು. ಇನ್ನು ಎರಡನೇ ಪ್ರಶ್ನೆಗೆ ಉತ್ತರ ಈ ಅಪ್ಪರ್ ಕೃಷ್ಣ ಯೋಜನೆಗೆ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ಏನು ಖರ್ಚು ಮಾಡಿದ್ದೇವೋ ಅವೆರ್ಲಾ ಪ್ರಿಲಿಮಿನರಿ ಕೆಲಸಕ್ಕಾಗಿ ಖರ್ಚಾಗಿದೆ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, 2-3 ಯೋಜನೆಗಳಲ್ಲಾದೆ ಕಾವೇರಿ ಬೇಸಿನ್‌ಗೆ 4-5 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿರತಕ್ಕಂಥಾದ್ದು ನಿಮ್ಮ ಅಂಕಅಂಶಗಳಿಂದ ಗೊತ್ತಾಗುತ್ತದೆ ಅಲ್ಲವೇ ? ಇಷ್ಟೊಂದು ಹಣ ಖರ್ಚು ಮಾಡಿ 1974 ನೇ ಇಸವಿ ಹತ್ತಿರ ಬಂದರೂ ಅದರ ಮೇಲೆ ಸರ್ಕಾರದವರು ಹೆಚ್ಚು ಗಮನ ಏಕೆ ಕೊಡಲಿಲ್ಲಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ನಾರ್ತ್ ಜೋನ್ ಲೆಕ್ಕ ಕೇಳಿದ್ದಾರೆ, ಅದರ ಫಿಗರ್ಸ್‌ನ್ನು ಕೊಟ್ಟಿದ್ದೇನೆ. ಇದನ್ನು ವರ್ಕ್ ಔಟ್ ಮಾಡಿದಮೇಲೆ ಅವರು ನನ್ನನ್ನು ಈ ಪ್ರಶ್ನೆ ಕೇಳುವ ಅವಶ್ಯಕತೆ ಇಲ್ಲ. ಆದರೆ ಕಾವೇರಿ ಬೇಸಿನ್‌ನಲ್ಲಿ ಏನು ಕೆಲಸ ಕಾರ್ಯಗಳು ನಡೆದಿವೆಯೋ ಅವೆರ್ಲಾ ಕೆಲಸ ತೆಗೆದುಕೊಳ್ಳುವುದಕ್ಕೆ ನಿಧಾನವಾಯಿತು ಕಾರಣ ಸೆಂಟ್ರಲ್ ವಾಟರ್ ಪವರ್

ಕಮೀಷನ್, ಗೌರ್ನಮೆಂಟ್ ಆಫ್ ಇಂಡಿಯಾದವರಿಂದ ಕ್ಲಿಯರೆನ್ಸ್‌ಗೆ ಕಾಯುತ್ತಾ ಇದ್ದೆವು. 2-3 ನೇ ಪಂಚವಾರ್ಷಿಕ ಯೋಜನೆಗಳಲ್ಲೂ ಕೂಡ ಕೆಲವು ಕಷ್ಟಗಳು ಬಂದುವು. ಡಿಸೈನ್ಸ್, ಬ್ಲೂ ಪ್ರಿಂಟ್ ತಯಾರಾಗಬೇಕಾಗಿತ್ತು. ಆದರೆ ಆ ಅವಧಿಯಲ್ಲಿ ಇನ್ನೂ ಹೆಚ್ಚು ಚುರುಕಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಸ್ವಾಮಿ, 2-3 ನೇ ಪಂಚವಾರ್ಷಿಕ ಯೋಜನೆಯಲ್ಲಿ ಇಷ್ಟು ಖರ್ಚಾಗಿದೆ ಎಂದು ಲೆಕ್ಕ ಕೊಟ್ಟಿದ್ದೀರಿ. ಅದರಲ್ಲಿ ಸಿಬ್ಬಂದಿ ವರ್ಗಕ್ಕೆ ಆಗಿರುವ ಖರ್ಚು ಒಟ್ಟು ಖರ್ಚಿನಲ್ಲಿ ಎಷ್ಟು ಪರ್ಸೆಂಟು ಖರ್ಚಾಗಿದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಸಿಬ್ಬಂದಿಗೆ ಎಷ್ಟು ಖರ್ಚು ಆಗಿದೆ, ಅದರ ಪರ್ಸೆಂಟು ಎಷ್ಟು ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಸಿಬ್ಬಂದಿಗೆ ಎಷ್ಟು ಖರ್ಚು ಆಗಿದೆ, ಡೆವಲಪ್‌ಮೆಂಟಿಗೆ ಎಷ್ಟು ಖರ್ಚಾಗಿದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೇಮಾವತಿ, ಹಾರಂಗಿ ಮತ್ತು ಕಾವೇರಿ ಬೇಸಿನ್‌ನಲ್ಲಿರ ತಕ್ಕಂಥ ಕೆಲಸಗಳು 1974 ನೇ ಇಸವಿ ಮದ್ರಾಸ್ ಮೈನೂರು ಒಪ್ಪಂದದ ಆಖೈರು ವರ್ಷ ಎಂದು ಗೊತ್ತಿದ್ದರೂ ಕೂಡ ಇದರಲ್ಲಿರುವ ಖರ್ಚನ್ನು ಕಡಮೆ ಮಾಡಿ ಮೊನ್ನೆತಾನೇ ತೆಗೆದು ಕೊಂಡಂಥ ಚಂದ್ರವಳ್ಳಿ ಪ್ರಾಜೆಕ್ಟಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿದ್ದೀರಿ. ನಾರ್ತ್‌ಜೋನ್‌ನಲ್ಲಿ ದ್ದಂಥ ಪ್ರಾಜೆಕ್ಟಿಗೆ ಪ್ರಾಮುಖ್ಯತೆ ಕೊಡಲು ಕಾರಣ ಏನು ? 1974ನೇ ಇಸವಿಯೊಳಗೆ ಈ ಅಗ್ರಿಮೆಂಟ್ ಆಖೈರು ಎನ್ನುವುದನ್ನು ಸರ್ಕಾರ ಗಮನಿಸಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—1974 ನೇ ಇಸವಿಗೆ ಈ ಒಪ್ಪಂದ ಮುಗಿಯುತ್ತದೆ ಎನ್ನುವುದು ಸರ್ಕಾರದ ಗಮನದಲ್ಲಿದೆ. ಆದರೂ ಈ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಏನು ಕಾರ್ಯ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೀವ್ರಗತಿಯಿಂದ ವಿಚಾರ ಮಾಡುತ್ತಾ ಇದೆ. ಅದಲ್ಲದೆ ನಾರ್ತ್‌ಜೋನ್ ಮತ್ತು ಸೌತ್ ಜೋನ್‌ನಲ್ಲಿರುವ ಕೆಲಸ ಕಾರ್ಯಗಳನ್ನು ಮಾಡಬೇಕಾ ಗಿದೆ, ಇದನ್ನೆಲ್ಲಾ ವಿಚಾರ ಮಾಡಿ ಒಂದು ಕಾರ್ಯಕ್ರಮ ಹಾಕಿಕೊಂಡು ಹೆಚ್ಚು ಚುರುಕಾಗಿ ಮಾಡಬೇಕು ಎನ್ನುವ ಮನಸ್ಸು ಸರ್ಕಾರಕ್ಕೆ ಇದೆ.

Mr. SPEAKER.— Next Question.

Sri B. P. GANGADHAR.—Sir, this is a very important matter. We must be allowed to put more supplementaries You must not brush aside this subject so lightly. I rose nearly 10 times to put a supplementary. I want to put a supplementary.

Mr. SPEAKER —I have allowed more than twelve hon. Members to put supplementaries. I cannot accommodate all the hon. Members during the Question Hour.

Sri B. P. GANGADHAR.—The interest of the State is being jeopardised. This is not a small matter This is a very important matter. By 1971 we are going to lose the whole right.

Mr. SPEAKER.—The importance of this question is known to everybody and by putting another supplementary he is not adding anything more to it.

Sri H. N. NANJE GOWDA.—It is most unfortunate that the Cauvery question is an anathema to the Chair.

Mr. SPEAKER.—I cannot accommodate all hon. Members during Question Hour.

Sri B. P. GANGADHAR.—This is a very important matter concerning the entire State.

Mr. SPEAKER.—Now the hon. Member may resume his seat.

Sri B. P. GANGADHAR.—Of course, I will obey the Chair, but the Chair must also understand the gravity of the situation.

Arrears of Sales Tax in Yadagiri and Shahapura Taluks

261. Sri K. R. NADAGOUDA (Yadagiri).—

Will the Minister for Finance, Planning and Youth Welfare be pleased to state : —

(*a*) the total arrears of Sales Tax in Yadagiri and Shahapur taluks ;

(*b*) the number of defaulters, who owe to the Government more than Rs. 15,000 ;

(*c*) the period of pendency of these arrears ?

Sri K. PUTTASWAMY (Minister Law, Labour and Parliamentary Affairs) [On behalf of SRI RAMAKRISHNA HEGDE (Minister for Finance, Planning and Youth Welfare)].—

(*a*) (i) Yadagiri taluk ... Rs. 3,84,148-34.
(ii) Shahapur taluk ... Rs. 3,10,272-10.

(*b*) Three.

(*c*) Between 2 to 6 months.

ಶ್ರೀ ಕೆ. ಆರ್. ನಾಡಗೌಡ.—ಮೂರು ಜನರ ಕಡೆಯಿಂದ ಬಹಳ ಬಾಕಿ ಬರಬೇಕಾಗಿದೆ. ಆದರೆ ಸಣ್ಣ ಪುಟ್ಟ ಡಿಫಾಲ್ಟರುಗಳಿಗೆ ಬಹಳ ತೊಂದರೆ ಕೊಟ್ಟು ದೊಡ್ಡವರಿಗೆ ಜಾಸ್ತಿ ಅನುಕೂಲ ಮಾಡಿಕೊಡುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಡಿಫಾಲ್ಟರ್ ಆದವರು ದೊಡ್ಡವರಾಗಲಿ, ಸಣ್ಣವರಾಗಲಿ ಎಲ್ಲರ ಮೇಲೂ ಕೂಡ ಒಂದೇ ವಿಧವಾದ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಆರ್. ನಾಡಗೌಡ.—ದೊಡ್ಡ ಡಿಫಾಲ್ಟರುಗಳಿಗೆ ಆಫೀಸರುಗಳು ಹೆಚ್ಚು ಅನುಕೂಲ ಮಾಡಿಕೊಡುತ್ತಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆನೂ ಅನುಕೂಲತೆ ಮಾಡಿಕೊಟ್ಟಿಲ್ಲ, ನಿಷ್ಪಕ್ಷಪಾತವಾದ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಎಂ. ನಾಗಪ್ಪ.—ಈಗ ಎತರಿಂದ 6 ತಿಂಗಳವರೆಗೆ ಬಾಕಿ ನಿಂತಿದೆ ಎಂದು ಉತ್ತರದಲ್ಲಿ ತಿಳಿಸಿದೆ. ಅವರ ಮೇಲೆ ಕ್ರಮ ತೆಗೆದುಕೊಂಡು ಒಂದು ವರ್ಷದೊಳಗೆ ವಸೂಲು ಮಾಡಲಾಗುವುದೇ ?

Sri K. PUTTASWAMY.—In all these 3 cases action has been taken for recovery of the amount by filing application in the Magistrate's Court under section 13(3) (b).